# ಪಿ.ಇ.ಎಸ್ ಕಾಲೇಜ್ ಆಫ್ ಇಂಜಿನಿಯರಿಂಗ್

ಮಂಡ್ಯ – 571 401, ಕರ್ನಾಟಕ

(ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಅಡಿಯಲ್ಲಿನ ಸ್ವಾಯತ್ತ ಸಂಸ್ಥೆ, ಕರ್ನಾಟಕ ರಾಜ್ಯ ಅನುದಾನಿತ ಸಂಸ್ಥೆ ಮತ್ತು ಎನ್.ಬಿ.ಎ.ಯ ಮಾನ್ಯತೆ ಪಡೆದಿರುತ್ತದೆ)

Phone : +91 8232–220043, 238683, 238042. Fax : +91 8232–222075

ನಂ: ಪಿಇಎಸ್/ಇಎಸ್‌ಟಿ/2018–19 ದಿನಾಂಕ: 14–02–2019

## ಉದ್ಯೋಗ ಪ್ರಕಟಣೆ

ಉಲ್ಲೇಖ: ಡಿಟಿಇ 50 ಇಎಸ್‌ಟಿ 4 (ಎ)(1) 2018/5556, ದಿನಾಂಕ: 08–02–2019

ಈ ಕೆಳಕಂಡ ಎಸ್.ಸಿ/ ಎಸ್.ಟಿ ಬ್ಯಾಕ್‌ಲಾಗ್ ಹುದ್ದೆಗಳನ್ನು (ಅನುದಾನಿತಆದರೆ ಪಿಂಚಣಿರಹಿತ) ಭರ್ತಿ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಹ ಅಭ್ಯರ್ಥಿಗಳು ರೂ. 600/– ಅರ್ಜಿ ಶುಲ್ಕವನ್ನು ಡಿ.ಡಿ ಮೂಲಕ ಪ್ರಾಂಶುಪಾಲರು, ಪಿ.ಇ.ಎಸ್ ಇಂಜಿನಿಯರಿಂಗ್ ಕಾಲೇಜು, ಮಂಡ್ಯರವರ ಹೆಸರಿಗೆ ಪಡೆದು ಅಥವಾ ಕಾಲೇಜಿನ ನಗದು ವಿಭಾಗದಲ್ಲಿ ಪಾವತಿ ಮಾಡಿ ಅರ್ಜಿ ನಮೂನೆಯನ್ನು ಕಛೇರಿಯಲ್ಲಿ ಪಡೆದು ದಿನಾಂಕ: **07–03–2019, 5.30 PM** ರೊಳಗೆ ಭರ್ತಿ ಮಾಡಿದ ಅರ್ಜಿಯೊಡನೆ ಸಂಬಂಧಿಸಿದ ಸೂಕ್ತ ದಾಖಲಾತಿಗಳನ್ನು ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿ ಖುದ್ದು ಅಥವಾ ಅಂಚೆ ಮೂಲಕ ಪ್ರಾಂಶುಪಾಲರು, ಪಿ.ಇ.ಎಸ್ ಇಂಜಿನಿಯರಿಂಗ್ ಕಾಲೇಜು, ಮಂಡ್ಯರವರಿಗೆ ಸಲ್ಲಿಸುವುದು. ಲಕೋಟೆಯ ಮೇಲೆ ಸ್ಪಷ್ಟವಾಗಿ ಹುದ್ದೆಯ ಹೆಸರು, ವಿಭಾಗ ಹಾಗೂ ವರ್ಗೀಕರಣವನ್ನು ನಮೂದಿಸತಕ್ಕದ್ದು.

| ಕ್ರ ಸಂ. | ವಿಭಾಗ | ಹುದ್ದೆ | ಹುದ್ದೆಗಳ ಸಂಖ್ಯೆ | ಮೀಸಲಾತಿ ವರ್ಗೀಕರಣ |
|---|---|---|---|---|
| 1 | ಮೆಕ್ಯಾನಿಕಲ್ ಇಂ. | ಮೆಕ್ಯಾನಿಕಲ್ | 01 | ಎಸ್‌ಟಿ–01 |
| 2 | ಸಿವಿಲ್ ಇಂ. | ಹೆಲ್ಪರ್ | 02 | ಎಸ್‌ಸಿ–01<br>ಎಸ್‌ಟಿ–01 |
| 3 | ಆಟೋಮೊಬೈಲ್ ಇಂ. | ಹೆಲ್ಪರ್ | 02 | ಎಸ್‌ಸಿ–01<br>ಎಸ್‌ಟಿ–01 |
| 4 | ಇ ಅಂಡ್ ಇ ಇಂ. | ಹೆಲ್ಪರ್ | 01 | ಎಸ್‌ಟಿ–01 |
| 5 | ಇ ಅಂಡ್ ಸಿ ಇಂ. | ಹೆಲ್ಪರ್ | 01 | ಎಸ್‌ಟಿ–01 |
| 6 | ಕಛೇರಿ | ದ್ವಿತೀಯ ದರ್ಜೆ ಸಹಾಯಕ | 02 | ಎಸ್‌ಸಿ–01<br>ಎಸ್‌ಟಿ–01 |

**ವಿದ್ಯಾರ್ಹತೆ ಹಾಗೂ ಸೇವಾನುಭವ :–**

ಎ) **ಮೆಕ್ಯಾನಿಕ್ :** ಎಸ್.ಎಸ್.ಎಲ್.ಸಿ ಯಲ್ಲಿ ತೇರ್ಗಡೆ ಹೊಂದಿದ್ದು, ಸಂಬಂಧಿಸಿದ ಇಂಜಿನಿಯರಿಂಗ್ ವಿಭಾಗದಲ್ಲಿ ಐ.ಟಿ.ಐ/ತಾಂತ್ರಿಕ ವಿಷಯದ ಬಗ್ಗೆ ಕರ್ನಾಟಕ ಸರ್ಕಾರದ ವೃತ್ತಿ ಪರ ಶಿಕ್ಷಣ/ ಕಾರ್ಮಿಕ ಮತ್ತು ತರಬೇತಿ ಇಲಾಖೆಯಿಂದ ನೀಡಲಾದ ಪ್ರಮಾಣ ಪತ್ರ ಹೊಂದಿರಬೇಕು.

ಬಿ) **ಹೆಲ್ಪರ್ :** ಎಸ್.ಎಸ್.ಎಲ್.ಸಿ ಯಲ್ಲಿ ತೇರ್ಗಡೆ ಹೊಂದಿದ್ದು, ಸಂಬಂಧಿಸಿದ ವಿಭಾಗದ ವಿಷಯದಲ್ಲಿ ಒಂದು ವರ್ಷ ಸೇವಾನುಭವ ಹೊಂದಿರಬೇಕು. ಆಟೋಮೊಬೈಲ್ ವಿಭಾಗದ ಸಹಾಯಕ ಹುದ್ದೆಗೆ ಇವುಗಳೊಡನೆ ಭಾರಿ ವಾಹನ ಚಾಲನಾ ಪರವಾನಿಗೆ ಹೊಂದಿರಬೇಕು.

ಸಿ) **ದ್ವಿತೀಯ ದರ್ಜೆ ಸಹಾಯಕ :** ದ್ವಿತೀಯ ಪಿ.ಯು.ಸಿ ಪರೀಕ್ಷೆ/ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.

1) **ವೇತನ :** ರಾಜ್ಯ ವೇತನ ಶ್ರೇಣಿ ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ವಿಸ್ತರಿಸಿರುವಂತೆ.

2) **ವಯೋಮಿತಿ :** ಕನಿಷ್ಠ 18 ಹಾಗೂ ಗರಿಷ್ಠ 40 ವರ್ಷ ಮೀರಿರಬಾರದು.

**ಸಾಮಾನ್ಯ ಷರತ್ತುಗಳು:–**

1) ಸರ್ಕಾರ ಮತ್ತು ಅನುದಾನಿತ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಅಭ್ಯರ್ಥಿಗಳು ಕಡ್ಡಾಯವಾಗಿ ಅಲ್ಲಿನ ಮುಖ್ಯಸ್ಥರ ಶಿಫಾರಸ್ಸಿನೊಡನೆ ಅರ್ಜಿ ಸಲ್ಲಿಸುವುದು.

2) ಕಡೇ ದಿನಾಂಕ ಮುಗಿದ ನಂತರ ಬಂದ ಅರ್ಜಿಗಳನ್ನು ಹಾಗೂ ಅಪೂರ್ಣ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

3) ಬ್ಯಾಕ್‌ಲಾಗ್ ಹುದ್ದೆಗಳನ್ನು ಬ್ಯಾಕ್‌ಲಾಗ್ ನೇಮಕಾತಿ ನಿಯಮಾನುಸಾರ ಆಯ್ಕೆ ಮಾಡಲಾಗುವುದು. ವೈಯುಕ್ತಿಕ ಸಂದರ್ಶನವಿರುವುದಿಲ್ಲ.

4) ಈ ಆಯ್ಕೆಯ ಪ್ರಕ್ರಿಯೆಯು ನಿರ್ದೇಶಕರು ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಇವರ ಅನುಮೋದನೆಗೆ ಒಳಪಟ್ಟಿರುತ್ತದೆ.

5) ಅರ್ಜಿ ಸಲ್ಲಿಸಿರುವುದನ್ನು ನೇಮಕಾತಿಯ ಹಕ್ಕೆಂದು ಪರಿಗಣಿಸಲಾಗುವುದಿಲ್ಲ.

6) ಅರ್ಜಿ ಶುಲ್ಕವನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ.

7) ನೇಮಕಾತಿಗೆ ಆಯ್ಕೆಗೊಂಡ ಅಭ್ಯರ್ಥಿಗಳು ಕೇಂದ್ರ ಸ್ಥಾನದಲ್ಲಿಯೇ ವಾಸವಿರಬೇಕು.

8) ಅಭ್ಯರ್ಥಿಯ ವಯೋಮಿತಿಯನ್ನು ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕೊನೆ ದಿನಾಂಕಕ್ಕೆ ಪರಿಗಣಿಸಲಾಗುವುದು.

ಸಹಿ/–
**ಡಾ: ಹೆಚ್.ಡಿ. ಚೌಡಯ್ಯ**
ಅಧ್ಯಕ್ಷರು, ಆಡಳಿತ ನಿರ್ವಹಣಾ ಮಂಡಳಿ

ಸಹಿ/–
**ಡಾ: ಹೆಚ್.ವಿ. ರವೀಂದ್ರ**
ಪ್ರಾಂಶುಪಾಲರು